ವಿಧಾನ ಸಭೆಯ ಪ್ರಶ್ನೆ ಸಂಖ್ಯೆ 197ಕ್ಕೆ ಅನುಬಂಧ – 1

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕಿಂಡಿ ಅಣೆಕಟ್ಟುಗಳ ವಿವರ

ಕ್ರಮ ಸಂಖ್ಯೆ	ಕಿಂಡಿ ಅಣೆಕಟ್ಟಿನ ಹೆಸರು	ಅಚ್ಚುಕಟ್ಟು ಹೆ ಗಳಲ್ಲಿ
1	ಮಳವಂತಿಗೆ ಗ್ರಾಮದ ಅಳಿಯಂತರ ಕಟ್ಟೆ	52 80
2.	ಇಂದ ಬೆಟ್ಟು ಗ್ರಾಮದ ಇಂದಬೆಟ್ಟು	42 80
3	ಅಂಡಿಂಜೆ ಗ್ರಾಮದ ಮೂಡುಕೋಡಿ	52 80
4	ಮಿತ್ತಬಾಗಿಲು ಗ್ರಾಮದ ಅನಡ್ಕ ಹಳ್ಳ ಮತ್ತು ನಂದಿಕಾಡು ಹಳ್ಳಕ್ಕೆ ಕಿಂಡಿ ಅಣೆಕಟ್ಟು	52 60
5	ಕಡಿರುದ್ಯಾವರ ಗ್ರಾಮದಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	42 03
6	ಮುಂಡಾಜೆ ಗ್ರಾಮದಲ್ಲಿ ಮುಂಡಾಜೆ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	63 01
7	ಇಳಂತಿಲ ಎಂಬಲ್ಲಿ ಕಿಂಡಿ ಅಣೆಕಟ್ಟು	40 00
8	ಕಡಿರುದ್ಯಾವರ ಗ್ರಾಮದ ಒಳಂಬ್ರ ಎಂಬಲ್ಲಿ ಬಂಡಾಜೆ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	52 61

ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ ವಿದ್ಯುತ್‌ಗಾರಗಳನ್ನು ಸ್ಥಾಪಿಸುವ ಬಗ್ಗೆ

65 (198) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಅರಂಗೋಡಿ ಗ್ರಾಮದ ಹನ್ನೆರಡು ಕವಲು ಎಂಬಲ್ಲಿ ಪಲ್ಗುಣಿ ನದಿಗೆ ಹಾಗೂ ಶಿಶಿಲ ಗ್ರಾಮದ ದೇಸೋಡಿ ಎಂಬಲ್ಲಿ ಕಪಿಲಾ ನದಿಗೆ ಅಡ್ಡಲಾಗಿ ಸಣ್ಣ ಅಣೆಕಟ್ಟೆಗಳನ್ನು ನಿರ್ಮಿಸಿ ವಿದ್ಯುತ್ ಸ್ಥಾವರ ಸ್ಥಾಪಿಸಲು ವಿಚಾರ ಸರ್ಕಾರಕ್ಕಿದೆಯೇ

ಆ) ಇದ್ದಲ್ಲಿ ಯಾವ ಖಾಸಗಿ ಸಂಸ್ಥೆಗಳಿಗೆ ಯೋಜನೆ ನೀಡಲಾಗಿದೆ ಇದಕ್ಕೆ ಸರ್ಕಾರದ ಅನುಮತಿ ಇದೆಯೇ

ಇ) ನೇರಿಂಜಾ ಗ್ರಾಮದ ದೊಂಡೋಲಿ ಎಂಬಲ್ಲಿಂಯೂ ಈ ಯೋಜನೆ ಅನುಷ್ಠಾನಗೊಳ್ಳುತ್ತದೆಯೋ

ಈ) ಇದರ ಉದ್ದೇಶ ಯೋಜನೆಯ ಗಾತ್ರ ಇದರ ರೂಪು ರೇಷೆಗಳ ವಿವರ ಒದಗಿಸುವುದು,

ಉ) ಇದರಿಂದ ಆ ಭಾಗದ ನಿವಾಸಿಗಳು ಹಾಗೂ ಪರಿಸರಕ್ಕೆ ಅಡ್ಡಿಯಾಗುತ್ತದೆಂದು ಪ್ರತಿಭಟನೆ ನಡೆಸಿರುವರೇ ಈ ಬಗ್ಗೆ ಯಾವ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿಯ ಮನ್ನಿಪಿಟ್ಲು ಎಂಬಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ತಿರುವುನಾಲೆ ನಿರ್ಮಿಸಿ 15 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ

ಸ್ಥಾಪಿಸಲು ಸರ್ಕಾರ ಖಾಸಗೀ ಕಂಪನಿಗೆ ಅನುಮತಿ ನೀಡಿದೆ ಅದರಂತೆ ಕಪಿಲಾ/ಶಿಶಿಲ ಹೊಳೆಗೆ ಅಡ್ಡಲಾಗಿ ತಿರುವುನಾಲೆ ನಿರ್ಮಿಸಿ 9 00 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸರ್ಕಾರವು ಖಾಸಗೀ ಕಂಪನಿಯೊಂದಕ್ಕೆ ಅನುಮತಿ ನೀಡಿದೆ

ಆ) ಮೆರ್ಸ್ ಬೊಬ್ಬ ಪ್ರಾಜೆಕ್ಟ್ ಹಾಗೂ ಮೆಸರ್ಸ್ ಪರ್ಪಿಕಳ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳಿಗೆ ಸರ್ಕಾರವು ಅನುಮತಿ ನೀಡಿದೆ

ಇ) ನೇರಿಯಾ ಗ್ರಾಮದ ಹತ್ತಿರ ಇಲ್ಲಿಮನೆ, ಪುದಿಯಾ ಹಾಗೂ ಪೆರಾಜೆ ಎಂಬ ಕಿರುಜಲ ವಿದ್ಯುತ್ ಯೋಜನೆಗಳು ಹಂಚಿಕೆಯಾಗಿದ್ದು ಅಭಿವೃದ್ಧಿದಾರರು ಇನ್ನೂ ಈ ಕುರಿತಾಗಿ ವಿವರವಾದ ಸರ್ವೇಕ್ಷಣೆ ಮಾಡುತ್ತಲಿರುವರು

ಈ) ಯೋಜನೆಯ ಉದ್ದೇಶ ಕಿರು ಜಲ ವಿದ್ಯುತ್ ಯೋಜನೆ ಸ್ಥಾಪಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಈ ಮೂರು ಕಿರು ಜಲ ವಿದ್ಯುತ್ ಯೋಜನೆಗಳು ತಲಾ 0 5 ಮೆಗಾ ವ್ಯಾಟ್ ಸಾಮರ್ಥ್ಯವುಳ್ಳದ್ದಾಗಿವೆ

ಉ) 1 ಬೊಬ್ಬರವರ 15 ಮೆಗಾ ವ್ಯಾಟ್ ಕಿರು ಜಲ ವಿದ್ಯುತ್ ಯೋಜನೆಯ ವಿಷವಾಗಿ ಸ್ಥಳೀಯರು ತಮ್ಮ ಫಲವತ್ತಾದ ಕೃಷಿ ಭೂಮಿ ಹಾಗೂ ತೀರ್ಥ ಸ್ಥಳ ಮುಳುಗುವುದಾಗಿ ಪ್ರತಿಭಟನೆ ವ್ಯಕ್ತಪಡಿಸಿದ್ದರು ಆದರೆ ಈ ಯೋಜನೆಯಿಂದ ಇಂತಹ ಯಾವುದೇ ಹಾನಿಯಾಗುವುದಿಲ್ಲ ಎಂದು ಯೋಜನೆಯ ಡಿ ಪಿ ಆರ್ ನಿಂದ ತಿಳಿದು ಬಂದಿದೆ

2 ಪರ್ಪಿಕಳ ಕಿರು ಜಲ ವಿದ್ಯುತ್ ಯೋಜನೆಯ ವಿಷಯವಾಗಿ ಯಾವುದೇ ಪ್ರತಿಭಟನೆ ಬಂದಿಲ್ಲ

3 ನೇರಿಯ ಗ್ರಾಮದ ಹತ್ತಿರ ಹಂಚಿಕೆಯಾಗಿರುವ ತಲಾ 0 5 ಮೆಗಾ ವ್ಯಾಟ್ ಸಾಮರ್ಥ್ಯದ ಇಲ್ಲಿಮನೆ ಪುದಿಯ ಹಾಗೂ ಪೆರಾಜೆ ಕಿರು ಜಲ ವಿದ್ಯುತ್ ಯೋಜನೆ ಬಗ್ಗೆ ಸ್ಥಳೀಯ ಗ್ರಾಮಸ್ಥರು ತಮ್ಮ ಜಮೀನಿಗೆ ನೀರಿನ ಸೌಕರ್ಯ ಇಲ್ಲವಾಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ ಆದರೆ ಇನ್ನೂ ಈ ಎಲ್ಲಾ ಯೋಜನೆಗಳ ವಿವರವಾದ ಸರ್ವೇಕ್ಷಣೆ ನಡೆಯುತ್ತಲಿದ್ದು ಇಂತಹ ಯಾವುದೇ ಆತಂಕಕ್ಕೆ ಆಸ್ಪದವಿಲ್ಲ ಆದರೆ ಯೋಜನೆಗಳಿಗೆ ಕರ್ನಾಟಕ ನವೀಕರಿಸಬಹುದಾದ ಇಂದನ ಅಭಿವೃದ್ಧಿ ನಿಯಮಿತ ಸಂಸ್ಥೆಯು ತಾಂತ್ರಿಕ ಅನುಮೋದನೆ ನೀಡುವಾಗ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಯೋಜನೆಗಳು ಪರಿಸರ ಸ್ನೇಹೀಯಾದಲ್ಲಿ ಮಾತ್ರ ಅನುಮೋದನೆ ನೀಡುವುದು

ದಾವಣಗೆರೆ ಸಮಗ್ರ ನೀರು ಸರಬರಾಜು ಯೋಜನೆಯ ಬಗ್ಗೆ

66 (115) ಶ್ರೀ ರವೀಂದ್ರನಾಥ್ ಎಸ್ ಎ (ಮಾಯಕೊಂಡ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾವಣಗೆರೆ ಸಮಗ್ರ ನೀರು ಸರಬರಾಜು ಯೋಜನೆ ಮುಗಿಯಲು ಇನ್ನು ಎಷ್ಟು ಕಾಲಾವಕಾಶ ಬೇಕಾಗಿದೆ

ಆ) ಯೋಜನೆ ಪ್ರಕಾರ ಆಗಿರುವ ಹಾಗೂ ಆಗಬೇಕಾಗಿರುವ ಕೆಲಸ ಎಷ್ಟು

ಇ) ಇದುವರೆಗೂ ಈ ಯೋಜನೆಗೆ ಮಾಡಿರುವ ವೆಚ್ಚ ಹಾಗೂ ಪೂರ್ಣವಾಗಲು ಬೇಕಾಗಿರುವ ಹಣ ಎಷ್ಟು?